**ವೈದ್ಯ:** ಗುಂಡಣ್ಣ, ನಿದ್ದೆ ಬರದಿದ್ದಾಗ ಯಾವುದಾದರು ಮಾತ್ರೆ ತಗೋತೀರಾ?
**ಗುಂಡ:** ಹಾಗೇನಿಲ್ಲ. ಟಿ.ವಿ. ಧಾರಾವಾಹಿ ನೋಡ್ತೀನಿ.

**ಗೆಳೆಯ:** ಹದ್ದುಗಳಿಗೆ ತುಂಬಾ ದೂರದೃಷ್ಟಿ ಇದೆ ಅಂತ ಹೇಳ್ತಾರಲ್ಲ ಅದು ನಿಜವೇ?
**ಗುಂಡ:** ಹೌದು, ಅದರಲ್ಲೇಕೆ ಅನುಮಾನ?
**ಗೆಳೆಯ:** ಅದು ಹೇಗೆ ಅಷ್ಟು ನಿಖರವಾಗಿ ಹೇಳ್ತೀಯಾ?
**ಗುಂಡ:** ಮತ್ತೆ ಹದ್ದುಗಳು ಕನ್ನಡಕ ಹಾಕುವುದನ್ನು ನೀನು ಎಲ್ಲಾದರೂ ನೋಡಿದ್ದೀಯಾ ಹೇಳು.

**ಪ್ರಯಾಣಿಕ:** ಸ್ಮಶಾನಕ್ಕೆ ಬರುತ್ತೀಯೇನಪ್ಪ?
**ಆಟೊ ಚಾಲಕ:** ಅಯ್ಯೋ ದಯವಿಟ್ಟು ಕ್ಷಮಿಸಿ ಸರ್, ಇಷ್ಟು ಬೇಗ ನಾನು ಅಲ್ಲಿಗೆ ಬರಲ್ಲ.

**ಗೃಹಿಣಿ:** ಏನಮ್ಮಾ ರೆಫ್ರಿಜಿರೇಟರ್ ಕ್ಲೀನ್ ಮಾಡ್ದಾ?
**ಕೆಲಸದಾಕೆ:** ಮಾಡಿದ್ದೀನಿ ಅಮ್ಮಾವ್ರೆ. ಅದರಲ್ಲಿದ್ದ ತಿಂಡಿಗಳೆಲ್ಲಾ ತುಂಬಾ ರುಚಿಯಾಗಿದ್ದವು.

**ರೋಗಿ:** ಡಾಕ್ಟ್ರೆ ಒಂದು ತಿಂಗಳ ಹಿಂದೆ ನನ್ನ ಬೆನ್ನಿನ ಮೇಲಿನ ಗಾಯಕ್ಕೆ ಪ್ಲಾಸ್ಟರ್ ಹಾಕಿದ್ದು ನೆನಪಿದೆ ತಾನೇ?
**ವೈದ್ಯ:** ಹೌದು ನೆನಪಿದೆ. ಅದಕ್ಕೆ ಈಗೇನು ಮಾಡಬೇಕು?
**ರೋಗಿ:** ಏನಿಲ್ಲಾ, ಏನ್ ಮಾಡಿದರೂ ಅದನ್ನು ತೆಗೆಯೋದಿಕ್ಕೆ ಆಗುತ್ತಿಲ್ಲ. ಏನಾದರೂ ಉಪಾಯ ಇದ್ದರೆ ಹೇಳಿ.

**ಗಿರಾಕಿ:** ಏನಯ್ಯಾ, ಮೊಟ್ಟೆ ಗುಂಡಾಗಿದೆ?
**ವ್ಯಾಪಾರಿ:** ಕ್ಷಮಿಸಿ ಸರ್, ಮೊಟ್ಟೆ ಇಟ್ಟವನು ನಾನಲ್ಲ. ಆ ಬಗ್ಗೆ ತಿಳಿಯಬೇಕಿದ್ದರೆ ಮೊಟ್ಟೆ ಇಟ್ಟ ಕೋಳಿಯನ್ನೇ ಕೇಳಿ.

**ಗುಂಡ:** ಹೋಳಿಗೆ ಕಹಿಯಾಗಿದೆ?
**ಹೆಂಡತಿ:** ನಿಮಗೆ ಡಯಾಬಿಟಿಸ್ ಇದೆ. ಅದಕ್ಕೆ ಹಾಗಲಕಾಯಿ ಹೋಳಿಗೆ ಮಾಡಿದ್ದೀನಿ.




ಎಂಥ ಸಾವು ಮಾರ್ರೆ!




ಆಡಳಿತ ವಿರೋಧಿ ಅಲೆಯಿಂದ ನಾವು ಗೆದ್ದಿದ್ದೇವೆ. ಮುಂದೆ ಸರ್ಕಾರ ನಡೆಸುವಾಗ ಎಚ್ಚರವಾಗಿರಬೇಕು

**ಪ್ರಿಯಕರ:** ಪ್ರಿಯೆ ನಿನಗಾಗಿ ಪ್ರಾಣ ಒಂದನ್ನು ಬಿಟ್ಟು ಬೇರೆ ಏನು ಬೇಕಾದರೂ ಕೇಳುಕೊಡುತ್ತೇನೆ.
**ಪ್ರೇಯಸಿ:** ಪ್ರಾಣ ಯಾಕೆ ಕೊಡಲ್ಲ?
**ಪ್ರಿಯಕರ:** ನೀನೇ ನನ್ನ ಪ್ರಾಣ ಅದಕ್ಕೆ...

**ಗುಂಡ:** ಗಣೇಶನ ಪಕ್ಕದ ಮನೆಯ ಭೀಮನ ಹೆಂಡತಿ ಅವನನ್ನು ಬಿಟ್ಟು ಹೋದ ಮೇಲೆ ಅವನಿಗೆ ರಾತ್ರಿ ಮಲಗೋಕೇ ಆಗ್ತಾ ಇಲ್ಲವಂತೆ.
**ಗಣೇಶ:** ಪಾಪ ಅವನಿಗೆ ತುಂಬಾ ದುಃಖ ಆಗಿರಬೇಕು ಬಿಡು.
**ಗುಂಡ:** ವಿಷಯ ಅದಲ್ಲ. ಅವಳು ಹೋಗುವಾಗ ಅವನ ಹಾಸಿಗೆಯನ್ನೂ ತೆಗೆದುಕೊಂಡು ಹೋಗಿದ್ದಾಳಂತೆ ಅದಕ್ಕೆ.

**ರಮಾ:** ರಂಗಮ್ಮಾ... ನಿನ್ನೆ ನನಗೂ ನನ್ನ ಯಜಮಾನರಿಗೂ ಭಾರಿ ಜಗಳ ಆಯ್ತು.
**ರಂಗಮ್ಮ:** ಪಾಪ ಅವರನ್ನು ನೆನಸಿಕೊಂಡರೇನೇ ಅಯ್ಯೋ ಅನ್ನಿಸುತ್ತೆ. ಈಗ ಹೇಗಿದ್ದಾರೆ?

**ರಾಯರು:** ಏನಪ್ಪಾ ಗುಂಡ... ಯಾವಾಗ ನೋಡಿದರೂ ಖುಷಿಯಾಗಿರುತ್ತೀಯಲ್ಲಾ ಏನು ಕಾರಣ?
**ಗುಂಡ:** ನಾನು ಅವಿವಾಹಿತ ಸರ್!

**ಗುಂಡ:** ಸರ್ ಸಂಬಳವನ್ನು ಕವರ್‌ನಲ್ಲಿ ಹಾಕಿಕೊಡಬೇಡಿ.
**ಆಫೀಸರ್:** ಯಾಕ್ರಿ ಹಾಗೆ ಹೇಳ್ತೀರಾ?
**ಗುಂಡ:** ಏನಿಲ್ಲಾ, ನೋಡಿದವರಿಗೆ ನಾನು ನಿಮ್ಮಿಂದ ಸಂಥಿಂಗ್ ತೆಗೆದುಕೊಳ್ಳುತ್ತಿರುವ ಹಾಗೆ ಕಾಣಿಸುತ್ತದೆ. ಅದಕ್ಕೆ.

**ಒಬ್ಬ ವಕೀಲ:** ನೀವು ತುಂಬಾ ಮೂರ್ಖರಿದ್ದೀರಿ.
**ಇನ್ನೊಬ್ಬ ವಕೀಲ:** ನೀವು ಮಹಾ ಮೂರ್ಖರಿದ್ದೀರಿ.
**ನ್ಯಾಯಾಧೀಶ:** ನೀವಿಬ್ಬರೂ ಒಬ್ಬರನ್ನೊಬ್ಬರು ಗುರುತಿಸಿಕೊಂಡಿರುವುದರಿಂದ ಕೇಸನ್ನು ಮುಂದುವರಿಸಬಹುದು.

**ಹೆಂಡತಿ:** ಯಾಕೋ... ಒಂದು ಗಂಟೆಯಿಂದ ನನ್ನ ತಲೆ ತಿರುಗುತ್ತಿದೆ. ಡಾಕ್ಟರ್ ಹತ್ತಿರ ಹೋಗೋಣವೇ?
**ಗುಂಡ:** ಬೇಡ ಕಣೆ, ಅವರ ಬಿಲ್ ನೋಡಿದ್ರೆ ನನ್ ತಲೆ ಇನ್ನೂ ತಿರುಗುತ್ತೆ.

**ಗೆಳೆಯ:** ಪಾರ್ಕ್‌ಗೆ ಬಂದು ವ್ಯಾಯಾಮ ಮಾಡದೆ ಹಾಗೇ ಹೋಗ್ತಾ ಇದೀಯಾ ಯಾಕೋ?
**ಗುಂಡ:** 'ಮಸಾಲೆ ರುಬ್ಬಬೇಕು ಬೇಗ ಬಾ' ಅಂತ ನನ್ನ ಹೆಂಡತಿ ವಾಟ್ಸ್ಆ್ಯಪ್ ಮೆಸೇಜ್ ಮಾಡಿದ್ದಾಳೆ. ಅದಕ್ಕೆ ಹೋಗ್ತಾ ಇದೀನಿ. ಇಲ್ಲಂದ್ರೆ ಟಿಫನ್ ಹಾಕಲ್ಲ ಅವಳು.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು